ಋ) : ರಾಜ್ಯದ ಗ್ರಾಮ ಪಂಚಾಯತಿಗಳಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಸರ್ಕಾರಿ ಸೌಲಭ್ಯ

ಶ್ರೀ ಜಿ. ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ಕರ್ನಾಟಕ ರಾಜ್ಯದ 6,000 ಗ್ರಾಮ ಪಂಚಾಯಿತಿಗಳಲ್ಲಿ ಕೆಲಸ ಮಾಡುತ್ತಿರತಕ್ಕಂತಹ 30,000 ನೌಕರರು ಅವರ ಸಂಘದ ನಾಯಕತ್ವದಲ್ಲಿ ಅವರ ಕನಿಷ್ಟ ಬೇಡಿಕೆಗಳಿಗೋಸ್ಕರ ಮುಖ್ಯಮಂತ್ರಿಗಳ ಗೃಹ ಕಛೇರಿ ಎದುರು ಧರಣಿಯನ್ನು ಮಾಡುತ್ತಿದ್ದಾರೆ. ಸುಮಾರು ವರ್ಷಗಳಿಂದ ಅವರು ಈ ಹೋರಾಟವನ್ನು ನಡೆಸುತ್ತಿದ್ದಾರೆ. 50 ರೂಪಾಯಿ, 100 ರೂಪಾಯಿ ಮತ್ತು 200 ರೂಪಾಯಿಗೆ ಕೆಲಸ ಮಾಡುತ್ತಿರತಕ್ಕಂತಹ ಜನ ಅವರಿಗೆ ಯಾವುದೇ ರೀತಿಯ ಸೌಲಭ್ಯಗಳಿಲ್ಲ. ಅವರಿಗೆ ಆ ಸೌಲಭ್ಯಗಳನ್ನು ಒದಗಿಸುವುದಕ್ಕೆ ಮತ್ತು ಕನಿಷ್ಟ ವೇತನ ನಿಗಧಿ ಮಾಡಬೇಕೆಂದು ಹೇಳತಕ್ಕಂತಹ ಸರ್ಕಾರದ ಕಾನೂನು ಏನಿದೆ, ಅದರ ಪ್ರಕಾರ ಅವರಿಗೆ ಕನಿಷ್ಟ ವೇತನ ಆದರೂ ನಿಗದಿ ಮಾಡಬೇಕು. ಹಾಗೆ ಅವರಿಗೆ ಸೇವಾ ನಿಯಮಗಳನ್ನು ರೂಪಿಸಿ ಅವರ ಕೆಲಸಕ್ಕೆ ಭದ್ರತೆಯನ್ನು ಒದಗಿಸಬೇಕೆಂಬ ಹಲವಾರು ಬೇಡಿಕೆಗಳನ್ನು ಇಟ್ಟು ನಾಲ್ಕೈದು ವರ್ಷಗಳಿಂದ ಹೋರಾಟ ನಡೆಸುತ್ತಿದ್ದಾರೆ. ಈ ಸಂಬಂಧ ಸರ್ಕಾರದ ಜೊತೆ ಹಲವಾರು ಸಂದರ್ಭದಲ್ಲಿ ಹಲವಾರು ಕಾಲಗಳಲ್ಲಿ ಚರ್ಚೆ ಕೂಡ ಮಾಡಿದ್ದಾರೆ. ಸಂಬಂಧಪಟ್ಟ ಮಂತ್ರಿಗಳ ಜೊತೆ ಚರ್ಚೆ ಮಾಡಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚೆ ಮಾಡಿದ್ದಾರೆ. ಏನು ಚರ್ಚೆ ಮಾಡಿದರೂ ಕೂಡ ಇದುವರೆಗೆ ಯಾವುದೇ ಒಂದು ಪರಿಹಾರವನ್ನು ಕಾಣದೆ ಇರತಕ್ಕಂತಹ 30,000 ಗ್ರಾಮ ಪಂಚಾಯತಿ ನೌಕರರು ಇವತ್ತು ಮುಖ್ಯ ಮಂತ್ರಿಗಳ ಮನೆಯ ಮುಂದೆ ಧರಣಿ ನಡೆಸುತ್ತಿದ್ದಾರೆ. ಇದರ ಬಗ್ಗೆ ಕಳೆದ ಸದನದಲ್ಲಿಯೂ ಕೂಡ ನಾನು ಒಂದು ಪ್ರಶ್ನೆ ಕೇಳಿದ್ದೆ. ಪರಿಶೀಲಿಸಲಾಗುತ್ತದೆ ಎಂದು ಉತ್ತರ ಕೊಟ್ಟಿದ್ದರು. ಜೊತೆಗೆ ಆ ಸಂಘದ ಮುಖಂಡರನ್ನು ಕರೆಸಿ ಚರ್ಚೆ ಮಾಡಿ ಬೇರೆ ಬೇರೆ ರಾಜ್ಯಗಳಲ್ಲಿ ಯಾವ ರೀತಿಯಾದ ಪರಿಸ್ಥಿತಿ ಇದೆ ಎಂದು ಮಾಹಿತಿಯನ್ನು ತರೆಸಿಕೊಂಡು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಸಂಬಂಧಪಟ್ಟ ಪಂಚಾಯತ್ ರಾಜ್ ಸಚಿವರು ಆಶ್ವಾಸನೆ ಕೊಟ್ಟಿದ್ದರು. ಹಾಗೆ ಆಶ್ವಾಸನೆ ಕೊಟ್ಟು ಒಂದು ವರ್ಷವಾಗಲೂ ಕೂಡ ಇದರ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಆದ್ದರಿಂದ ಅವರು ಹೋರಾಟ ಮಾಡುವುದು ಅನಿವಾರ್ಯವಾಗಿದೆ. ಅನಿವಾರ್ಯವಾಗಿ ಮುಖ್ಯ ಮಂತ್ರಿಗಳ ಗೃಹ ಕಛೇರಿಯ ಹತ್ತಿರ ಧರಣಿ ನಡೆಸುತ್ತಿದ್ದಾರೆ. ಆದರಲ್ಲಿ ಕೆಲಸ ಮಾಡುತ್ತಿರತಕ್ಕಂತಹ ಬಹುಪಾಲು ಜನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರು ಕೂಡ ಹೆಚ್ಚಿನ ಜನ ಇರತಕ್ಕಂಥದ್ದು. ಸುಮಾರು 30,000 ನೌಕರರಿದ್ದಾರೆ. ಇದರ ಬಗ್ಗೆ ಸರ್ಕಾರ ದಿವ್ಯ ನಿರ್ಲಕ್ಷ್ಯದಿಂದ ಅವರನ್ನು ಕಾಣುತ್ತಿದೆ. ಕನಿಷ್ಟ ವೇತನವಾದರೂ ಅವರಿಗೆ ನೀಡಬೇಕೆಂದು ಕೇಳುತ್ತೇನೆ. ಇವತ್ತು ಅವರು ಧರಣಿ ಮಾಡುತ್ತಿದ್ದಾರೆ. ನನ್ನ ವಿನಂತಿ ಇಷ್ಟೆ. ಧರಣಿ ಮಾಡತಕ್ಕಂತಹ ಆ ನೌಕರರು ಏನಿದ್ದಾರೆ ಅಲ್ಲಿಗೆ ಸರ್ಕಾರದ ಪರವಾಗಿ ಯಾರಾದರೂ ಹೋಗಿ ಸರ್ಕಾರದ ನಿಲುವು ಏನು ಎಂದು ಸ್ಪಷ್ಟ ಮಾಡಿದರೆ ಬಹುಶಃ ಅವರ ದಾರಿ ಅವರಿಗೆ, ಇವರ ದಾರಿ ಇವರಿಗೆ ಆಗಬಹುದು. ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಹೇಳಿ, ಇದುವರೆಗೆ ತೆಗೆದುಕೊಂಡಿಲ್ಲ. ನಾನು ಮುಖ್ಯ ಮಂತ್ರಿಗಳಿಗೆ ವಿನಂತಿಸುತ್ತೇನೆ, ಅವರ ಗೃಹ ಕಛೇರಿ ಮುಂದೆ ಧರಣಿ ನಡೆಯುತ್ತಿದೆ. ಮುಖ್ಯ ಮಂತ್ರಿಗಳಾದರೂ ಅಥವಾ ಸಂಬಂಧಪಟ್ಟ ಸಚಿವರಾದರೂ

ಅಲ್ಲಿಗೆ ಹೋಗಿ ಸರ್ಕಾರದ ನಿಲುವು ಏನು? ಏನು ಕ್ರಮ ತೆಗೆದುಕೊಳ್ಳುತ್ತಾರೆಂದು ಸ್ಪಷ್ಟಪಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್ : ಸದನದ ಕಲಾಪಗಳು ಮುಗಿದ ಮೇಲೆ ಸಂಬಂಧಪಟ್ಟ ಮಂತ್ರಿಗಳನ್ನು ಅಲ್ಲಿಗೆ ಕಳುಹಿಸಿಕೊಡುತ್ತೇನೆ.

ಎ) : ಚಾಮರಾಜ ನಗರಕ್ಕೆ ಕುಡಿಯುವ ನೀರಿನ ಸೌಲಭ್ಯ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಹಿಂದುಳಿದ ಗಡಿ ಪ್ರದೇಶ ಚಾಮರಾಜನಗರ ಮತ್ತು ರಾಮಸಮುದ್ರ ಪಟ್ಟಣಗಳಲ್ಲಿ.....

ಅಧ್ಯಕ್ಷರು : ನಮ್ಮದು ನಿಮ್ಮದು ಎಲ್ಲಾ ಗಡೀನೆ.

ಶ್ರೀ ವಾಟಾಳ್ ನಾಗರಾಜ್ : ಹೌದು ನಮ್ಮದು ನಿಮ್ಮದು ಎಲ್ಲಾ ಸೇರಿ ಗಡಿ ಪ್ರದೇಶಗಳಿಗೆ ಚಾಮರಾಜನಗರ ಮತ್ತು ಶಿವಮೊಗ್ಗ, ಮೈಸೂರು ಇಲ್ಲಿಗೆಲ್ಲಾ ಮುಖ್ಯಮಂತ್ರಿಗಳು ಎರಡು ಸಲ ಅಲ್ಲ ಮೂರು ಸಲ ತಾವು ಸಭೆಯನ್ನು ಕರೆದಿರಿ ಮತ್ತು ಅದು ಸಚಿವ ಸಂಪುಟ ಸಭೆಗೆ ಬರುತ್ತಲೂ ಬಹಳ ಬೇಗ ಮುಗಿಸೋಣ ಎಂದು ತಾವು ಹೇಳಿ ಈಗಾಗಲೇ 6 ವರ್ಷಗಳಾಗಿದೆ. ಆದ್ದರಿಂದ ದಯಮಾಡಿ ತಾವು ಬಹಳ ಬೇಗ ಏಕೆಂದರೆ ಶ್ರೀ ವಿರೇಂದ್ರ ಪಾಟೀಲ್‌ರವರ ಕಾಲದಲ್ಲಿ ಅದು ಉದ್ಘಾಟನೆಯಾಗಿದ್ದು ತಮ್ಮ ಕಾಲದಲ್ಲಾದರೂ ನೀರು ಕೊಡುವಂತಹ ವ್ಯವಸ್ಥೆ ಆಗಲಿ ಎನ್ನುವಂತಹದ್ದು ನನ್ನ ಆಸೆ.

ಶ್ರೀ ಜೆ. ಹೆಚ್. ಪಟೇಲ್ : ಮಾನ್ಯ ಸದಸ್ಯರು ಮತ್ತು ಸಂಬಂಧಪಟ್ಟ ಅಧಿಕಾರಿಗಳನ್ನೂ ಕರೆಯಿಸಿ ಅಲ್ಲಿ ಕಂಟ್ರಾಕ್ಟರ್ಸ್ ಕೆಲವರು ಕಾಸ್ಟ್ ಎಸ್ಕಲೇಷನ್ ಕೇಳಿದ್ದರು, ಅದನ್ನ ಪರ್‌ಮಿಟ್ ಮಾಡಲಿಕ್ಕೆ ಆಗುವುದಿಲ್ಲ ಎಂದು ಹೇಳಿದ್ದೇವು, ಆದರೆ ಈಗ ಕೆಲಸ ತ್ವರಿತಗತಿಯಿಂದ ನಡೆಯಲೆಂದು ಕಾಸ್ಟ್ ಎಸ್ಕಲೇಷನ್‌ನ ಕಂಡಿಷನಗೆ ಒಪ್ಪಿದ್ದೆವೆ. ನಾವು ಹಣ ಕೊಡುತ್ತಾ ಇದ್ದೇವೆ, ಆದರೆ ಚಾಮರಾಜನಗರ ಕೆಲಸ ಇನ್ನೂ ಬಹಳ ಇದೆ. ಚಾಮರಾಜನಗರ, ಶಿವಮೊಗ್ಗ ಎರಡೂ ಒಟ್ಟಿಗೆ ತೆಗೆದುಕೊಂಡಿದ್ದು, ಅದಕ್ಕೆ ಈಗ ಎಷ್ಟಾಗಿದೆ ಕಾಸ್ಟ್ ಎಸ್ಕಲೇಷನ್, ಇವರ ವರ್ಕ್ಸ್‌ನಲ್ಲಿ ಎಷ್ಟು ಬೇಕಾಗಿದೆ ಎನ್ನುವುದರ ಲೆಕ್ಕ ಇನ್ನೂ ತಿಳಿದಿಲ್ಲ. ತಿಳಿದ ಮೇಲೆ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾತುಕತೆಯಾಗಿದೆ. ಮಾತುಕತೆ ಆಗಿ ಅದು ಸಚಿವ ಸಂಪುಟದ ಸಭೆಗೆ ಬರಬೇಕು ಅಷ್ಟೇ. ತಾವು ತಾತ್ವಿಕವಾಗಿ ಒಪ್ಪಿದ್ದೀರಿ. ಈಗ ನಾನು ಹೇಳುವುದೇನೆಂದರೆ, ಈಗಾಗಲೇ ಆರು ವರ್ಷಗಳಾಗಿದೆ, ನಿಧಾನವಾಗುತ್ತಿದೆ. ಆದರೆ ಲೆಕ್ಕಾಚಾರವಾಗಿ ಇದು ಇಷ್ಟೊತ್ತಿಗೆ ಮುಗಿಯಬೇಕಿತ್ತು. ಆದ್ದರಿಂದ ಅದಕ್ಕೆ ತಾವು ಸ್ವಲ್ಪ ಮನಸ್ಸು ಮಾಡಿದರೆ ನನ್ನ ದೃಷ್ಟಿಯಿಂದ ಬೇಗ ಮುಗಿಯುತ್ತದೆ. ಚುನಾವಣೆ ಬರುವುದು ಇನ್ನೂ ಎರಡು ಎರಡೂವರೆ ವರ್ಷ ಇದೆ. ಅಷ್ಟರೊಳಗಾದರೂ ಇದು ಬೇಗ ಬಂದರೆ ಬಹಳ ಅನುಕೂಲವಾಗುತ್ತದೆ.